ಮುಂತಾದ ಕಾರ್ಯಕ್ರಮಗಳನ್ನು ನಡೆಸುತ್ತದೆ. ರಾಜ್ಯದ ಹೊರಗಿರುವ ಗಡಿ ಪ್ರದೇಶದಲ್ಲಿ ಕನ್ನಡದ ಅಭಿವೃದ್ಧಿಗಾಗಿ ಕನ್ನಡ ಸಂಘ ಸಂಸ್ಥೆಗಳಿಗೆ ಕಟ್ಟಡ ನಿರ್ಮಾಣ ಸಲಕರಣೆಗಳ ಖರೀದಿಗಾಗಿ ಕನ್ನಡ ಶಾಲೆಗಳ ಅಭಿವೃದ್ಧಿ ಮತ್ತು ಇನ್ನಿತರ ಸಾಂಸ್ಕೃತಿಕ ಕಾರ್ಯ ಚಟುವಟಿಕೆಗಳಿಗೆ ಧನ ಸಹಾಯ ನೀಡಲಾಗುತ್ತಿದೆ.

ಆ) ಪ್ರಸ್ತುತ ಸಾಲಿನಲ್ಲಿ ಸುಗಮ ಸಂಗೀತ, ನಾಟಕ, ಜಾನಪದ ಮತ್ತು ಕೋಲಾಟಗಳಂತಹ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ.

ತುಮಕೂರು ನಗರದ ರಂಗಮಂದಿರದ ಬಗ್ಗೆ

369 - ಶ್ರೀ ಎಸ್. ಶಿವಣ್ಣ (ತುಮಕೂರು) : ಮಾನ್ಯ ಕನ್ನಡ ಸಂಸ್ಕೃತಿ ಮತ್ತು ಮಹಿಳಾ ಮತ್ತು ಮಕ್ಕಳ ಕಲ್ಯಾಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ತುಮಕೂರು ನಗರದ ಬಾಳನಕಟ್ಟೆಯಲ್ಲಿರುವ ರಂಗಮಂದಿರದ ಸುತ್ತಮುತ್ತ ಅಕ್ರಮವಾಗಿ ಕೊಳಗೇರಿ ಸುತ್ತಮುತ್ತ ಅಕ್ರಮವಾಗಿ ಕೊಳಗೇರಿ ಪೆಟ್ಟಿಗೆ ಅಂಗಡಿಗಳಿಂದ ರಂಗಮಂದಿರದ ಪರಿಸರ ನೈರ್ಮಲ್ಯ ಹಾಳುಗೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ರಂಗಮಂದಿರದ ಸುತ್ತ ಉದ್ಯಾನವನ ನಿರ್ಮಿಸಿ ನಗರದ ಹಾಗೂ ರಂಗಮಂದಿರದ ಸೌಂದರ್ಯ ಹೆಚ್ಚಿಸುವಲ್ಲಿ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?*

ಶ್ರೀಮತಿ ಬಿ.ಟಿ. ಲಲಿತಾನಾಯಕ್ (ಕನ್ನಡ ಮತ್ತು ಸಂಸ್ಕೃತಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ರಾಜ್ಯ ಸಚಿವರು) :

ಅ) ಇಲ್ಲ

ಆ) ರಂಗಮಂದಿರದ ಸುತ್ತ ಉದ್ಯಾನವನ್ನು ನಿರ್ಮಿಸಲು ತುಮಕೂರು ನಗರಸಭೆಯನ್ನು ಕೋರಲಾಗುವುದು.

ಹುಬ್ಬಳ್ಳಿ ನಗರದ ರಸ್ತೆಗಳ ದುರಸ್ಥಿ

365 - ಶ್ರೀ ಜಗದೀಶ ಶೆಟ್ಟರ್, ಎಂಎಲ್ಎ (ಹುಬ್ಬಳ್ಳಿ) : ಮಾನ್ಯ ನಗರಾಭಿವೃದ್ಧಿ ಕಾಡಾ ಮತ್ತು ಹೈದರಾಬಾದ್-ಕರ್ನಾಟಕ ಅಭಿವೃದ್ಧಿ ಮಂಡಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಹುಬ್ಬಳ್ಳಿ ಮಹಾನಗರದಲ್ಲಿ ರಸ್ತೆಗಳು ವಾಹನಗಳು ಓಡಾಡಲು ಸಾಧ್ಯವಿಲ್ಲದಷ್ಟು ದುಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಈ ರಸ್ತೆಗಳ ದುರಸ್ತಿಗೆ ಹುಬ್ಬಳ್ಳಿ-ಧಾರವಾಡ ಮಹಾನಗರಪಾಲಿಕೆಯಲ್ಲಿ ಸಾಕಷ್ಟು ಹಣವಿಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಇ) *ಹಾಗಿದ್ದಲ್ಲಿ ರಸ್ತೆಗಳ ದುರಸ್ತಿಗೆ ವಿಶೇಷ ಧನಸಹಾಯ ಮಾಡುವ ಪ್ರಸ್ತಾಪವೇನಾದರೂ ಸರ್ಕಾರದ ಮುಂದಿದೆಯೇ?*

ಈ) *ಹಾಗಿದ್ದಲ್ಲಿ, ರಸ್ತೆಗಳ ದುರಸ್ತಿಗೆ ಸರ್ಕಾರ ಕೈಗೊಳ್ಳಲು ಉದ್ದೇಶಿಸಿರುವ ಕ್ರಮಗಳೇನು?*

ಶ್ರೀ ವೈಜನಾಥ್ ಪಾಟೀಲ್ (ನಗರಾಭಿವೃದ್ಧಿ ಕಾಡಾ, ಮತ್ತು ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ ಸಚಿವರು) :

ಅ) ಸತತವಾಗಿ ಬಿದ್ದ ಅನಿರೀಕ್ಷಿತ ಮಳೆಯಿಂದಾಗಿ ಹುಬ್ಬಳ್ಳಿ-ಧಾರವಾಡ ಮಹಾನಗರಸಭೆಯ ಆಡಳಿತ ಪ್ರದೇಶದ ರಸ್ತೆಗಳು ಹಾಳಾಗಿವೆ.

ಆ) ಹುಬ್ಬಳ್ಳಿ-ಧಾರವಾಡ ಮಹಾನಗರಸಭೆಯು ಸರ್ಕಾರದಿಂದ ಸಹಾಯಧನವನ್ನು ಪಡೆಯಲು ಯಾವುದೇ ಠರಾವನ್ನು ಪಾಸು ಮಾಡಿಲ್ಲ.

ಇ) ಸರ್ಕಾರಕ್ಕೆ ಪ್ರಸ್ತಾವನೆ ಬಂದಾಗ ಅವುಗಳ ಅರ್ಹತೆಯ ಮೇರೆಗೆ ಪರಿಶೀಲಿಸಲಾಗುವುದು.

ಈ) ಮೇಲೆ (ಇ)ಗೆ ಕೊಟ್ಟಿರುವ ಉತ್ತರದಿಂದಾಗಿ ಇದು ಉದ್ಭವಿಸುವುದಿಲ್ಲ.

ಅನೇಕಲ್ ಕ್ಷೇತ್ರದಲ್ಲಿ ಬೃಹತ್ ಕೈಗಾರಿಕೆಗಳು

433 - ಶ್ರೀ ವೈ. ರಾಮಕೃಷ್ಣ (ಆನೇಕಲ್) : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೃಹತ್, ಮಧ್ಯಮ ಹಾಗೂ ಸಣ್ಣ ಪ್ರಮಾಣದ ಮತ್ತು ಜವಳ ಕೈಗಾರಿಕೆಗಳು ಆನೇಕಲ್ ವಿಧಾನ ಸಭಾ ಕ್ಷೇತ್ರದಲ್ಲಿ ಎಷ್ಟಿದೆ? (ವರ್ಗವಾರು ಮಾಹಿತಿ ನೀಡುವುದು)

ಆ) ಪ್ರತಿ ಕೈಗಾರಿಕೆಯಲ್ಲಿ ಎಷ್ಟು ನೌಕರರನ್ನು ನೇಮಕಾತಿ ಮಾಡಲಾಗಿದೆ ಅದರಲ್ಲಿ ಎಷ್ಟು ಜನ ಸ್ಥಳೀಯರಿದ್ದಾರೆ?

ಇ) ಸ್ಥಳೀಯ ಅರ್ಹ ಅಭ್ಯರ್ಥಿಗಳಿಗೆ ನೇಮಕಾತಿ ಮಾಡುವ ಬಗ್ಗೆ ಆದ್ಯತೆ ನೀಡುವ ಉದ್ದಿಮೆದಾರರಿಗೆ ಸರ್ಕಾರವು ಒತ್ತಾಯಿಸಿದೆಯೆ?

ಶ್ರೀ ಆರ್.ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು):

ಅ) ಆನೇಕಲ್ ವಿಧಾನ ಸಭಾ ಕ್ಷೇತ್ರದಲ್ಲಿ ಒಟ್ಟು 42 ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳು ಹಾಗೂ 807 ಸಣ್ಣ ಪ್ರಮಾಣದ ಕೈಗಾರಿಕೆಗಳು ಇರುತ್ತವೆ. ಮಧ್ಯಮ ಕೈಗಾರಿಕೆಗಳು ಇರುತ್ತವೆ. ಮಧ್ಯಮ ಮತ್ತು ಬೃಹತ್ ವಲಯದಲ್ಲಿ ಯಾವುದೇ ಜವಳಿ ಉದ್ಯಮಗಳಿರುವುದಿಲ್ಲ. ಸಣ್ಣ ಪ್ರಮಾಣದ ಕೈಗಾರಿಕಾ ವಲಯದಲ್ಲಿ 447 ಜವಳಿ ಕೈಗಾರಿಕೆಗಳು ಇರುತ್ತವೆ.

ಆ)

ಪ್ರವರ್ಗ	ಮೊತ್ತ	ಸ್ಥಳೀಯ	ಶೇಕಡ
ಬೃಹತ್ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳು	4062	3200	79
ಸಣ್ಣ ಪ್ರಮಾಣದ ಕೈಗಾರಿಕೆಗಳು	6652	6652	100

(ಪ್ರೋತ್ಸಾಹ ಧನ ಮತ್ತು ರಿಯಾಯಿತಿಗಳನ್ನು ಮಂಜೂರು ಮಾಡುವಾಗ ಕೈಗಾರಿಕೆಗಳು ನೀಡಿದ ಘೋಷಣೆಯನ್ನಾಧರಿಸಿ ಈ ಮಾಹಿತಿಯನ್ನು ನೀಡಲಾಗಿದೆ.)

ಇ) ಹೌದು. ಸ್ಥಳೀಯ ಪ್ರದೇಶಗಳಲ್ಲಿ ಸ್ಥಾಪಿಸಲ್ಪಡುವ ಹೊಸ ಕೈಗಾರಿಕೆಗಳಲ್ಲಿ ಸಿ ಮತ್ತು ಡಿ ವರ್ಗಗಳಲ್ಲಿನ ಶೇಕಡ 100ರಷ್ಟು ಹುದ್ದೆಗಳನ್ನು ಹಾಗೂ ಇತರ ವರ್ಗಗಳಲ್ಲಿ ಶೇಕಡ 80 ರಷ್ಟು ಹುದ್ದೆಗಳನ್ನು ಸ್ಥಳೀಯರಿಗೆ ನೀಡಬೇಕೆಂಬ ಷರತ್ತನ್ನು ಹಾಕಲಾಗಿದೆ. ಈ ಬಗ್ಗೆ ಉದ್ಯಮಿಗಳಿಂದ ಘೋಷಣಾ ಪತ್ರವನ್ನೂ ಸಹ ಪಡೆಯಲಾಗುತ್ತಿದೆ.

ಕೊಳಚೆ ಪ್ರದೇಶಗಳ ಸ್ವಚ್ಛತೆ ಬಗ್ಗೆ

464 - ಶ್ರೀ ವೈ. ರಾಮಕೃಷ್ಣ (ಆನೇಕಲ್ ಕ್ಷೇತ್ರ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?